ತಲುಪಿ, ಮಗನನ್ನು ಬದುಕಿಸುವ ಹಂಬಲ. ಅವನ ಸ್ಥಿತಿ ಕಂಡು ರಸ್ತೆಯಲ್ಲಿ ಸಾಗುತ್ತಿದ್ದವರು, ಅನುಕಂಪದಿಂದ ದಿಟ್ಟಿಸಿದರು. ಆ ಊರಿನಲ್ಲಿ ಯಾವುದಕ್ಕೂ ಸರಿಯಾದ ಮೂಲಭೂತ ವ್ಯವಸ್ಥೆಯು ಇರಲಿಲ್ಲವಾದ್ದರಿಂದ ಇಂಥ ಒಂದು ನೋಟ ಅವರಿಗೆ ಹೊಸದೇನೂ ಆಗಿರಲಿಲ್ಲ. ಏನಾದರೂ ಇಂಥ ಅಪಾಯವಾದರೆ, ಆರೋಗ್ಯ ಹದಗೆಟ್ಟರೆ, ಸೈಕಲ್ಲಿಗೆ ಕಟ್ಟಿಕೊಂಡೋ, ತಳ್ಳುಗಾಡಿಯಲ್ಲಿ ಹಾಕಿಯೋ ಯಾವುದು ತುರ್ತಿಗೆ ದೊರಕುವುದೋ ಅದರಲ್ಲಿ, ಯಾವುದೂ ವ್ಯವಸ್ಥೆ ಇರದಿದ್ದರೆ ಹೀಗೇ ಹೆಗಲ ಮೇಲೆ ಹೊತ್ತುಕೊಂಡು ಹೋಗುವುದಿತ್ತು.

ಕಾಯಕನಾಥ ಆಸ್ಪತ್ರೆ ಏನೋ ಸೇರಿದ. ಆದರೆ ಅಲ್ಲಿ ವೈದ್ಯರು ಇರಲಿಲ್ಲ. ಪಕ್ಕದ ಊರಿಗೆ ತುರ್ತು ಕರೆ ಬಂದಿತೆಂದು ಹೋಗಿದ್ದರು.

ಕಾಯಕನಾಥ ಕಂಗೆಟ್ಟು ತಲೆ ಬಡಿದುಕೊಂಡು ಅಸಹಾಯಕನಾಗಿ ಹೃದಯ ಬಿರಿಯುವಂತೆ ಪ್ರಲಾಪಿಸಿದ. ಮಗನ ದೇಹವನ್ನು ಆಸ್ಪತ್ರೆಯ ಆವರಣದಲ್ಲಿಟ್ಟು ರೋಧದಿಸುವ ದೃಶ್ಯ ಯಾರ ಕರುಳನ್ನೂ ಬಗೆಯುವಂತಿತ್ತು. ವಿಧಿ ಆಗಲೇ ತನ್ನ ಆಟವಾಡಿಯಾಗಿತ್ತು. ನರ್ಸುಗಳು ಅವರಿಗೆ ತೋಚಿದ ಉಪಶಮನ ನೀಡುವ ಹೊತ್ತಿಗೆ ಸಾರಂಗ ಕೊನೆಯುಸಿರೆಳೆದಿದ್ದ.

ಕಾಯಕನಾಥ ಅಲ್ಪಾವಧಿಯ ಅಂತರದಲ್ಲಿ ತನ್ನ ಪ್ರೀತಿಪಾತ್ರರನ್ನು ಕಳೆದುಕೊಂಡು ಅನಾಥನಾಗಿಬಿಟ್ಟ. ಮರಳಿ ಊರಿಗೆ ಬರಲು ಒಂದು ಆಂಬ್ಯುಲೆನ್ಸ್ ಕೂಡಾ ಅಲ್ಲಿ ಸೌಲಭ್ಯವಿರಲಿಲ್ಲ. ರೋದಿಸುತ್ತಲೇ ಮಗನ ಕಳೇಬರವನ್ನು ತಾನುಟ್ಟ ಪಂಚೆಯಲ್ಲಿ ಸುತ್ತಿಕೊಂಡು ಹೆಗಲ ಮೇಲೆ ಹಾಕಿಕೊಂಡು ಊರಿಗೆ ಮರಳಿದ. ಅವನಿದ್ದ ಮನೆಯ ಆಸುಪಾಸಿನವರೆಲ್ಲಾ ಸೇರಿ ಅಂತಿಮಕ್ರಿಯೆಗೆ ಸಹಕರಿಸಿದರು. ಮಿನಾಲಿ ಮತ್ತು ಸಾರಂಗ ಈಗ ಅವನ ಪಾಲಿಗೆ ನೆನಪು ಮಾತ್ರ. ಅವರನ್ನು ಸುಟ್ಟ ಬೂದಿಯ ಅವಶೇಷಗಳಷ್ಟೇ ತನ್ನ ಹೃದಯದಲ್ಲಿ ಹೊತ್ತುಕೊಂಡು ಕಾಯಕನಾಥ ನಿತ್ಯ ಉರಿಯುತ್ತಿದ್ದ, ಬೇಯುತ್ತಿದ್ದ, ಕೊರಗುತ್ತಿದ್ದ, ಬದುಕಿದ್ದೂ ಕ್ಷಣಕ್ಷಣಕ್ಕೆ ಸಾಯುತ್ತಿದ್ದ. ಅವನಿಗೆ ತಾನು ಊರಿಗೆ ಬರಲೇಬಾರದಿತ್ತು, ಬಂದದ್ದರಿಂದ ಇಲ್ಲಿ ಮಿನಾಲಿಯನ್ನು ಕಳೆದುಕೊಂಡೆ, ಸಾರಂಗನನ್ನು ಕಳೆದುಕೊಂಡೆ. ಅಲ್ಲೇ ಇದ್ದಿದ್ದರೆ ಬದುಕು ಹೀಗೆ ಮೂರಾಬಟ್ಟೆಯಾಗುತ್ತಿರಲಿಲ್ಲ ಎನ್ನುವ ಪಶ್ಚಾತ್ತಾಪ, ಸಂಕಟ ಅವನನ್ನು ಕಿತ್ತು ತಿನ್ನುತ್ತಿತ್ತು. ಬದುಕಿನಲ್ಲಿ ಇನ್ನು ಯಾವ ಆಸಕ್ತಿಯೂ ಉಳಿದಿರಲಿಲ್ಲ. ಎಲ್ಲವನ್ನೂ ಕಳೆದುಕೊಂಡ ಶೂನ್ಯ ಮನಸ್ಥಿತಿಯಲ್ಲಿ ಅವನು ದಿನ ಕಳೆಯುತ್ತಿದ್ದ. ರಕ್ತ ಸಂಬಂಧಿಗಳೋ, ಸ್ನೇಹಿತರೋ ಹತ್ತಿರದಲ್ಲಿದ್ದು ಎರಡು ಸಾಂತ್ವನದ ನುಡಿಗಳಾಡಿದ್ದರೆ, ಇವನೂ ದುಃಖ ಹಂಚಿಕೊಂಡಿದ್ದರೆ ಮನಸ್ಸು ಹಗುರವಾಗುತ್ತಿತ್ತು. ಅದಕ್ಕೂ ಆಸ್ಪದವಿರಲಿಲ್ಲ. ಕಾರಣ ಕಾಯಕನಾಥ ಅಲ್ಲಿಗೆ ಹೊಸಬ. ತಾನಾಯಿತು, ತನ್ನ ಕೆಲಸವಾಯಿತು ಎಂಬಂತಿದ್ದ. ಸಾರಂಗನ ಮೇಲಿನ ಪ್ರೀತಿಗೆ ಅವನ ಅಂತಿಮ ಕರ್ಮದ ವೇಳೆ ಸೇರಿದ್ದವರು ಮತ್ತೆ ತಂತಮ್ಮ ದುಡಿಮೆಯಲ್ಲಿ ವ್ಯಸ್ತರಾಗಿದ್ದರು. ಹೀಗಾಗಿ ದುಃಖದ ಹೊರೆಯ ಅಡಿಯಲ್ಲಿ ಕಾಯಕನಾಥ ನಜ್ಜುಗುಜ್ಜಾಗಿ ಹೋಗಿದ್ದ.



* * *

ಕಾಯಕನಾಥನ ಅಣ್ಣ ಗೋರಕನಾಥ ಅದೆಲ್ಲಿಂದಲೋ ಸುದ್ದಿ ಕೇಳಿ ತಮ್ಮನೆಡೆಗೆ ಧಾವಿಸಿ ಬಂದಿದ್ದ. ತಮ್ಮ ದುಃಖದ ಗೋರಿಯಲ್ಲಿ ಹುದುಗಿರುವಾಗಲೂ ಸಹ, ಅವರಿಗೆಲ್ಲಾ ಹೇಳದೇ ಹುಡುಗಿಯ ಹಿಂದೆ ಓಡಿಹೋಗಿದ್ದರಿಂದ ಹೀಗಾಯಿತೆನ್ನುವ ತೆರದಲ್ಲಿ ಮಾತನಾಡಿ ತನ್ನ ಕುದಿ ತಣಿಸಿಕೊಂಡ. ತನ್ನ ಮನೆಗೆ ಆಹ್ವಾನಿಸಿದ. ಆ ಮನೆಯ ಮಾಲೀಕನಿಗೂ ಇವನು ಹೋದರೆ ಸಾಕೆನ್ನುವಂತಾಗಿತ್ತು. ಇತ್ತೀಚೆಗೆ ದುಡಿಯಲೂ ಹೋಗದೇ ಮನೆಯಲ್ಲೇ ಮಲಗಿಕೊಂಡಿರುವ ಕಾಯಕನಾಥ ಬಾಡಿಗೆಯೂ ಸರಿಯಾಗಿ ಕೊಡುತ್ತಿರಲಿಲ್ಲ. ಅವನಿದ್ದ ಮನೆಯಲ್ಲಿ ಎರಡು ಸಾವಾಗಿದ್ದರಿಂದ ಈಗಾಗಲೇ ಮನೆಯಲ್ಲಿ ದೋಷವಿದೆ ಎಂದು ಎಲ್ಲರೂ ಮಾತನಾಡಿಕೊಳ್ಳತೊಡಗಿದ್ದರು. ಇವನಿಗೂ ಏನಾದರೂ ಆದರೆ, ತನಗೆ ಅಪವಾದ ಬಂದೀತೆಂದು ಹೆದರಿ ತಮ್ಮನನ್ನು ಅರಸಿ ಬಂದ ಗೋರಕನಾಥನ ಬಳಿ, "ನಿಮ್ಮ ತಮ್ಮನನ್ನು ಕರೆದುಕೊಂಡು ಹೋಗಿ ಸ್ವಲ್ಪ ಉಪಚರಿಸಿ ಸಮಾಧಾನ ಹೇಳಿ ತುಂಬಾ ನೊಂದಿದ್ದಾನೆ.." ಎಂದು ನಾಲ್ಕು ಅನುಕಂಪದ ಮಾತುಗಳಾಡಿ ಕಾಯಕನಾಥನನ್ನು ಸಾಗಹಾಕಿದರು.

ಆ ವಾತಾವರಣದಿಂದ ಕಾಯಕನಾಥ ಅಣ್ಣನ ಮನೆಗೆ ಬಂದ. ನಾಲ್ಕು ದಿನ ಎಲ್ಲವೂ ಯಾಂತ್ರಿಕವಾಗಿ ನಡೆಯಿತು.

"ಸುಮ್ನೆ ಮನೇಲಿರೋ ಬದಲು ಕೆಲಸಕ್ಕೆ ಹೋಗು... ನಾಲ್ಕು ಕಾಸು ದುಡಿ. ಕೂತ್ರೆ ಏನು ಸಿಗುತ್ತೆ..?" ಎನ್ನುವ ಮಾತು ಬರಲು ಆರಂಭಿಸಿದವು. ಜಡವಾದ ವಸ್ತುವಿನಂತೆ ಬಿದ್ದಿರುತ್ತಿದ್ದ ಕಾಯಕನಾಥನ ಮನಸ್ಸಿನ ಗಾಯ ಇನ್ನೂ ಆರಿರಲಿಲ್ಲ. ಅವನಿಗೆ ನಿಂತರೆ, ಕುಳಿತರೆ, ಮಿನಾಲಿ, ಅವಳ ಹೂನಗು, ತುಂಬು ಪ್ರೀತಿ, ಸಾರಂಗನ ಮುಗ್ಧ ಮುಖ, ಅವನ ಬಾಲಲೀಲೆಗಳು ಮನಪಟಲದಲ್ಲಿ ಸುಳಿದು ಅವನನ್ನು ಒಳಗೇ ಹಣ್ಣಾಗಿಸಿದವು. ಕಳೆದುಕೊಂಡವರಷ್ಟೇ ನೋವಿನ ಪ್ರಮಾಣ ಬಲ್ಲರು. ಆ ಜಾಗವನ್ನು ಬೇರಾರೂ ತುಂಬಲಾರರು. ಕಾಯಕನಾಥ ಬಂದ ವಿಷಯ ತಿಳಿದು, ಅವನಣ್ಣನಿಂದ ಮಾಹಿತಿ ದೊರೆತು ಅವನ ಉಳಿದ ಸೋದರ ಸೋದರಿಯರು, ಪರಸ್ಪರ ಮಾತನಾಡಿಕೊಂಡು ಒಂದು ಭಾನುವಾರ ಬಿಡುವು ಮಾಡಿಕೊಂಡು ಕಾಯಕನಾಥನನ್ನು ಕಾಣಲು ಗೋರಕನಾಥನ ಮನೆಗೆ ಆಗಮಿಸಿದರು. ಅನುಕಂಪದ ಮಾತನಾಡತೊಡಗಿದರು. ಅದಾವುದೂ ಕಾಯಕನಾಥನ ಹೃದಯದ ಬೇಗೆ ಶಮನಪಡಿಸಲು ಅಶಕ್ತವಾಯಿತು. ಅವರುಗಳ ಮಾತಿನ ಗದ್ದಲದಲ್ಲಿ ಕಾಯಕನಾಥನ ಮನಸ್ಸಿನ ನೋವು ಮೂಕವಾಗಿತ್ತು. ಒಳಗಿನ ಅಳಲು ಭಾರವಾಗಿತ್ತು.

"ಎಷ್ಟು ದಿನ ಅಂತ ಹೀಗೇ ಇರ್ತೀಯಾ..? ಬೇರೆ ಮದ್ವೆ ಮಾಡಿಕೋ" ಒಬ್ಬ ಅಣ್ಣ ಸಲಹೆ ನೀಡಿದ.

ಕಾಯಕನಾಥ ಹೌಹಾರಿದ.

"ಮಗನ ಚಿತೆಯ ಬೆಂಕಿ ಇನ್ನೂ ಹೃದಯದಲ್ಲಿ ಆರಿಲ್ಲ. ಆಗಲೇ ಬೇರೆ ಮದುವೆಯ ಮಾತಾ...? ಹೀಗೆ ಮಾತನಾಡಲು ಹೇಗೆ ಮನಸ್ಸು ಬರುತ್ತೆ ನಿಮಗೆ?" ಕಾಯಕನಾಥ ಸಿಡುಕಿದ.

"ಮತ್ತೆ ಹೀಗೇ ಇರಲು ನೀನೇನು ಸನ್ಯಾಸಿಯೇ? ಒಂಟಿ ಬಾಳು ಎಷ್ಟು ದಿನವವೆಂದು ಬಾಳಲು ಸಾಧ್ಯ? ನಿನ್ನ ನೋಡಿಕೊಳ್ಳಲು ಯಾರಿದ್ದಾರೆ? ನಮಗೆ ನಮ್ಮನಮ್ಮದೇ ಆದ ಸಂಸಾರವಿದೆ. ನಿನ್ನ ನೋಡಿಕೊಳ್ಳಲು ನಮ್ಮಿಂದಾದೀತೇ ಹೇಳು? ಹೋದವರು ಹೋದರು. ಅವರ ಹಿಂದೆ ಹೀಗೆ ಅಳುತ್ತಾ ಕುಳಿತರೆ, ಜೀವನ ಮುಂದೆ ಹೋಗುತ್ತದೆಯೇ?"

'ಹೋಗದಿದ್ದರೆ ಬೇಡ. ನಾನಂತೂ ಇನ್ನೊಂದು ಮದ್ವೆ ಅಗಲ್ಲ. ಹೀಗೇ ಇದ್ದು ಬಿಡ್ತೀನಿ. ನೀವ್ಯಾರೂ ನನ್ನ ನೋಡಿಕೊಳ್ಳುವುದೂ ಬೇಡ..." ಕಾಯಕನಾಥನಿಗೆ ಅವರ ಮಾತು ಹಿಂಸೆ ತರಿಸಿತ್ತು.

"ನಾವು ಹೇಳೋದು ನಿನ್ನ ಒಳ್ಳೆಯದಕ್ಕೆ.